9

**ಕರ್ನಾಟಕ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಐವನ್ ಡಿ'ಸೋಜಾ, ಶ್ರೀ ಬಿ.ಎಂ.ಫಾರೂಖ್, ಶ್ರೀ ಕೆ.ಅಬ್ದುಲ್ ಜಬ್ಬಾರ್ ಹಾಗೂ ಶ್ರೀ ಕೆ.ಹರೀಶ್ ಕುಮಾರ್ ರವರುಗಳಿಂದ ಜಂಟಿಯಾಗಿ ನಿಯಮ 330ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.**

ವಿಷಯ: **ಮಂಗಳೂರಿನಲ್ಲಿ 19ನೇ ಡಿಸೆಂಬರ್ 2019 ರಂದು ನಡೆದ ಗೋಲಿಬಾರ್‌ನಲ್ಲಿ ಪೊಲೀಸ್ ಅಧಿಕಾರಿಗಳು ಕರ್ತವ್ಯಲೋಪ ಎಸಗಿರುವುದು ಮತ್ತು ನಿಯಮ ಮೀರಿ ಗೋಲಿಬಾರ್ ನಡೆಸಿರುವುದರಿಂದ ಅಮಾಯಕರ ಜೀವ ಬಲಿಯಾಗಿದ್ದು, ಈ ಬಗ್ಗೆ ಪೊಲೀಸ್ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ ಬಗ್ಗೆ.**

ಉತ್ತರ: ರಾಜ್ಯಾದ್ಯಂತ\ಸಿಎಎ/ಎನ್‌ಸಿಆರ್/ಎನ್‌ಪಿಆರ್ ವಿರುದ್ಧ ಇಲ್ಲಿಯವರೆಗೂ ಒಟ್ಟಾರೆಯಾಗಿ 736 ಪ್ರತಿಭಟನೆ / ಮೆರವಣಿಗೆಗಳು / ಬೃಹತ್ ಸಮಾವೇಶಗಳು ಜರುಗಿದ್ದು, ಮಂಗಳೂರು ನಗರದ ಘಟನೆಯೊಂದನ್ನು ಹೊರತುಪಡಿಸಿ ಉಳಿದಂತೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲಾಗುತ್ತಿದೆ.

ಮಂಗಳೂರು ಘಟನೆ ಸಂಬಂಧಿಸಿದಂತೆ ಎಲ್ಲಾ ಸೂಕ್ತ ಹಾಗೂ ಬಂದೋಬಸ್ತ್ ವ್ಯವಸ್ಥೆಗಳನ್ನು ಮಾಡಲಾಗಿದ್ದು, ಉದ್ರಿಕ್ತ ಗುಂಪಿನ ಅತಿರೇಕದ ನಡವಳಿಕೆಯಿಂದ ಸಾರ್ವಜನಿಕ ಆಸ್ತಿ ಮತ್ತು ಪ್ರಾಣಹಾನಿ ತಡೆಯುವ ನಿಟ್ಟಿನಲ್ಲಿ ಮತ್ತು ವಿವಿದೆಡೆ ಹರಡದಂತೆ ಮತ್ತು ಕಾನೂನು ಸುವ್ಯವಸ್ಥೆ ಹತೋಟಿಗೆ ತರುವ ನಿಟ್ಟಿನಲ್ಲಿ ಅಧಿಕಾರಿಗಳು ಕಾನೂನಿನ ಅನುಸಾರ ಅನಿವಾರ್ಯವಾಗಿ ಕ್ರಮ ತೆಗೆದುಕೊಂಡಿದ್ದು, ಯಾವುದೇ ನಿರ್ಲಕ್ಷತೆ ತೋರದೆ ಸಮರ್ಥವಾಗಿ ಪರಿಸ್ಥಿತಿಯನ್ನು ನಿಯಂತ್ರಿಸಲಾಗಿದೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹತೋಟಿಯಲ್ಲಿರುತ್ತದೆ.

**ಹೆಚ್‌ಡಿ 72 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು